ಎಂ.ವಿ.ಸಿ.457/2024, ಪಿ.ಡಬ್ಲೂ-1 ಹೆಸರುಃ ಮಧುಕರಾನಂದ

**<u>ದಿಃ18-06-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎನ್.ಹೆಚ್.ಕೆ. ವಕೀಲರಿಂದಃ</u>**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಅಜ್ಜಂಪುರ ಪೊಲೀಸ್ ಠಾಣೆಯ ಠಾಣಾ ಮೊಖದ್ದಮೆ ಸಂಖ್ಯೆ 42/2024 ಕ್ಕೆ ಸಂಬಂಧಿಸಿದ ದೂರು, ಪ್ರಥಮ ವರ್ತಮಾನ ವರದಿ, ಮಹಜರು, ವಾಹನ ಅಮಾನತ್ತು ಪಂಚನಾಮೆ, ವಾಹನ ತಪಾಸಣ ವರದಿ, ಗಾಯದ ಪ್ರಮಾಣ ಪತ್ರ, ಕೆ.ಎ.66-ಹೆಚ್.0045 ರ ಆರ್.ಸಿ. ಪುಸ್ತಕ, ಎಂ.ಅಣ್ಣಯ್ಯರವರಿಗೆ ಸಂಬಂಧಿಸಿದ ಚಾಲನ ಪರವಾನಗಿ ಹಾಗೂ ದೋಷಾರೋಪಣ ಪಟ್ಟಿಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.1 ರಿಂದ 9 ಎಂದು ಗುರುತಿಸಲಾಯಿತು. ಆರಾಧನ ಆರ್ಥೋಪೆಡಿಕ್ ಸೆಂಟರ್, ಶಿವಮೊಗ್ಗ ರವರು ನೀಡಿರುವ ಬಿಡುಗಡೆಯ ಸಾರಾಂಶವನ್ನು ಹಾಜರುಪಡಿಸಿದ್ದು ನಿಪಿ.10 ಎಂದು ಗುರುತಿಸಲಾಯಿತು. ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ.11 ಎಂದು ಗುರುತಿಸಲಾಯಿತು. ನನಗೆ ಸಂಬಂಧಿಸಿದ ಆಧಾರ್ ಕಾರ್ಡ್‌ನ್ನು ಹಾಜರುಪಡಿಸಿದ್ದು ನಿಪಿ.12 ಎಂದು ಗುರುತಿಸಲಾಯಿತು. 9 ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.13(1) ರಿಂದ ನಿಪಿ.13(9) ಎಂದು ಗುರುತಿಸಲಾಯಿತು. 6 ವೈದ್ಯಕೀಯ ಸಲಹಾ ಚೀಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.14(1) ರಿಂದ 14(6) ಎಂದು ಗುರುತಿಸಲಾಯಿತು. ಒಂದು ಕ್ಷ ಕಿರಣವನ್ನು ಹಾಜರುಪಡಿಸಿದ್ದು ನಿಪಿ.15 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ